ಚಾಂಬನ್ ಲಂಗೋಟಿ ಮಾತ್ರ ಉಳಿಸಿಕೊಂಡು ಯಾವುದೊ ಮರದೆಲೆಯನ್ನು ಜಗಿದು ಮೈಗೆಲ್ಲ ಲೇಪಿಸಿಕೊಂಡ. ಬೃಹದಾಕಾರದ ಮರವನ್ನು ಕೋತಿಯಂತೆ ಸರಸರನೆ ಏರಿಹೋದ. ಕೈಯಲ್ಲಿಯ ಹಗ್ಗವನ್ನು ಕೆಳಗಿಳಿಬಿಟ್ಟು ಬೋಗುಣಿ ಮೇಲೆ ತರಿಸಿಕೊಂಡ. ನಸುಗತ್ತಲಲ್ಲಿ ಮರದಮೇಲೆ ಹೊಗೆ, ಜೇನುಹುಳಗಳ ಝೇಂಕಾರ ಕೇಳಿಸತೊಡಗಿತು. ಕೆಲಸಮಯದಲ್ಲಿ ಬೋಗುಣಿ ಕೆಳಗಿಳಿಬಿಟ್ಟು ಅವನೂ ಇಳಿದ. ಕತ್ತಲಲ್ಲಿ ಸ್ವಲ್ಪದೂರ ನಡೆದು ದೊಂದಿ ಹಚ್ಚಿಕೊಂಡು ಗುಡಿಸಲು ಸೇರಿದರು. ಐದಾರು ಕಿಲೋದಷ್ಟು ಜೇನಿದೆ ಅನಿಸಿತು. ಹೆಜ್ಜೇನುತುಪ್ಪ ರುಚಿಯಾಗಿತ್ತು. ಅಂಡಮಾನದ ಜಾರವಾಗಳು ಹೀಗೇ ಮೈಗೆ ಸೊಪ್ಪಿನ ರಸ ಲೇಪಿಸಿಕೊಳ್ಳುವ ಸಂಗತಿ ಓದಿದ್ದ. ಇದೇನು ಅಂತ ಚಾಂಬನ್‌ನೊಡನೆ ಕೇಳಿದ. ಈಗೀಗ ಸಲುಗೆಯಾಗಿದ್ದರು; ಆತ ಕೆಲ ಪ್ರಶ್ನೆಗಳಿಗೆ ಮಾತು ಬದಲಿಸುತ್ತಿದ್ದ. ಕಾಡು ಅವರಿಗೆ ಮನೆಯಾದರೂ ಅಲ್ಲಿ ನಿಷ್ಠುರವಾಗಿಯೇ ಇರುತ್ತಿದ್ದರು. ಚೆಂಗುಟ್ಟಿ ಅವರಿಗೆ ಹುಟ್ಟಿದ ಐದನೆಯವಳೊ ಆರನೆಯವಳೊ. ವರ್ಷ ಎರಡು ವರ್ಷಕ್ಕೆ ಹುಟ್ಟುತ್ತಹೋದ ಅದೆಷ್ಟು ಸಂತಾನಗಳು ಆರು ತಿಂಗಳಾಗುವುದರೊಳಗೆ ಬದುಕು ಮುಗಿಸಿ ವಯನಾಡಿಂದ ಈ ಕಾಡಿನುದ್ದಕ್ಕು ಯಾವ ಯಾವ ಮಣ್ಣಲ್ಲಿ ಮೊಳಕೆಯೊಡೆಯದ ಬೀಜವಾಗಿ ಮಲಗಿವೆ ಲೆಕ್ಕವಿಲ್ಲ. ಕರ್ಪಳು ಮಾತು ಕಮ್ಮಿ. ಚಾಂಬನ್‌ಗಿಂತ ಚೆಂಗುಟ್ಟಿ ಮಾತಿನಲ್ಲಿ ಮುಂದೆ.

ಚೆಂಗುಟ್ಟಿ ಮೊಳಕೈಯಲ್ಲಿ ಬುಟ್ಟಿ ಅಮುಕಿಕೊಂಡು ಮುಂದಿದ್ದಳು. ಈಗೀಗ ಅವನಿಗೆ ಅವಳ ಮೈ ವಾಸನೆ ಅನಿಸುತ್ತಿರಲಿಲ್ಲ. ಕಿರಿದಾದ ಸೊಂಟಕ್ಕೆ ಮುಂಡು ಒಪ್ಪುತ್ತದೆ ಅಂತಲು ಅನಿಸುತ್ತಿತ್ತು. ಸೊಂಟದವರೆಗೆ ಬರುವ ಸಮೃದ್ಧ ಕೂದಲನ್ನು ಅವಳು ಎರಡೂ ಕೈಯೆತ್ತಿಕೊಂಡು ಸುತ್ತಿಹಿಂದೆ ಗಂಟು ಹಾಕಿಕೊಳ್ಳುವುದು ಚಂದ. ಇವನ ಕಾಲು ತೊಡೆಗಳೀಗ ಕಂದುಬಣ್ಣಕ್ಕೆ ತಿರುಗಿದ್ದವು. ತನ್ನ ಮೈಯು ವಾಸನೆ ಹೊಡೆಯುತ್ತಿದೆಯೇನೊ ಯಾರಿಗ್ಗೊತ್ತು ಅಂದುಕೊಂಡ. ತಪ್ಪಿಸಿಕೊಳ್ಳುವ ಯತ್ನದಲ್ಲಿ ಬಿದಿರು ಹೆಣೆಯೊಂದು ತರಚಿ ಮುಂಗೈಗೆ ಗೀರಿ ರಕ್ತ ಒಸರತೊಡಗಿತು. ಚೆಂಗುಟ್ಟಿ ತಿರುಗಿದವಳು ನಕ್ಕಳು. ಸುಮ್ಮನೆ ನಿತ್ತವನನ್ನು ನೋಡಿ ಹತ್ತಿರ ಬಂದವಳು ಅವನ ಗಾಯವನ್ನು ನಾಲಗೆಯಿಂದ ನೆಕ್ಕತೊಡಗಿದಳು. ಬೆಚ್ಚಗಿನ ನಾಲಗೆಯ ಸವರುವಿಕೆ ಮೈಮೇಲೆ ಸುಖದ ಮುಳ್ಳೆಬ್ಬಿಸಿತು. 'ನಾಲಗೆಯಲ್ಲಿ ಔಷಧವಿರತದೆ. ಪ್ರಾಣಿಗಳು ಮಾಡೋದು ನೋಡಿಲ್ಲವೇನು?' ಛೇಡಿಸಿದಳು. ಆ ಕ್ಷಣದಲ್ಲಿ ಅವನಿಗೆ ಯಾಕೋ ಹಾಗೆ ಮಾಡಬೇಕೆನಿಸಿತು. ಅವಳ ಮೇಲುದವನ್ನು ಮೆತ್ತಗೆ ತೆಗೆದ. ತನ್ನೆದೆಯನ್ನೆ ಎವೆಯಿಕ್ಕದೆ ನೋಡುತ್ತಿರುವ ಅವನ ಕೈಯನ್ನು ಹಿಡಿದವಳ ಕಣ್ಣುಗಳಲ್ಲಿ ಸಮ್ಮತಿಯಿತ್ತು. ಹಿತದಲ್ಲಿ ಹೊರಡುವ ನರಳಿಕೆಗೆ ಯಾವ್ಯಾವುದೊ ಹಕ್ಕಿಗಳು ಮಾರುತ್ತರ ಕೊಟ್ಟವು. ಉಸಿರಿನ ಸ್ವರ ಎಲೆಗಳಲ್ಲಿ ಮರ್ಮರಿಸುವ ಮೆಲುಗಾಳಿ. ಎಷ್ಟೋ ಹೊತ್ತಿನ ಮೇಲೆ ಗೆಡ್ಡೆ ಅಗೆಯುವ ಸದ್ದು ಸಲ್ಲಾಪ ಅಲ್ಲಿ ಸುರುವಾಯಿತು. ಬರುವಾಗ ತಿಳಿಯಿತು. ಅವಳಿಗೆ ಮದುವೆಯಾಗಿತ್ತಂತೆ. ಒಂದೆ ವರ್ಷದಲ್ಲಿ ಆತ ಸತ್ತುಹೋಗಿದ್ದ. ಹುಟ್ಟಿದ ಗಳಿಗೆ ಸರಿಯಿಲ್ಲ ಅಂತ ಮತ್ತೆ ಮದುವೆಯಾಗಲಿಲ್ಲ. ಕೈ ನೋಡಿಕೊಂಡ, ಗಾಯವೀಗ ಸಣ್ಣ ಗೆರೆಯಷ್ಟು ಕ್ಷೀಣಿಸಿತ್ತು.

ಜೇನುತುಪ್ಪ ವಿನಿಮಯ ಮಾಡಿದ ಚಾಂಬನ್ ಯಾರಿಂದೋ ಹತ್ತು ಕಿಲೋದಷ್ಟು ಅಕ್ಕಿಯನ್ನು ತಂದ. ಅದರಲ್ಲಿಯ ದೂಳು ರೇಶನ್ ಅಕ್ಕಿ ಅಂತ ಹೇಳಿತು. ಬಿಪಿಎಲ್ ರೇಶನ್ ಕಾರ್ಡ್ ಇವರಿಗೆ ಸಿಗುತ್ತಿತ್ತಲ್ಲ ಅನಿಸಿತು ದಿವೋತ್ತಮನಿಗೆ. ಮನೆಯೂ ಅಡ್ರೆಸ್ಸೂ ಇಲ್ಲದ ಲೋಕಾತೀತರಿಗೆ ಆಧಾರ್, ರೇಶನ್ ಮುಂತಾದ ಕಾರ್ಡುಗಳೂ ಅತೀತವೆ. ರಾತ್ರಿ ಅಂಗಾತ ಮಲಗಿದ್ದ. ಆಚೆಯ ಚಾಂಬನ್ ಚಾಪೆ ಖಾಲಿಯಿತ್ತು. ಆತ ಗುಡಿಸಲೊಳಗೆ ಕರ್ಪುಳೊಂದಿಗಿದ್ದ ಸಾಕ್ಷಿ ಆಗಾಗ ಕೇಳಿಬರುತ್ತಿತ್ತು. ಗುಡ್ಡದ ತುದಿಯಲ್ಲಿ ರೊಟ್ಟಿಯ ತುದಿಯಷ್ಟೆ ಮುಕ್ಕಾದ ಚಂದ್ರ ಎದ್ದು ಬಂದ. ಹುಣ್ಣಿವೆ ಹತ್ತಿರ ಬಂತು ಕಾಣತದೆ. ಹೌದಲ್ಲ!... ಅಂದರೆ ಇನ್ನೊಂದು ಹುಣ್ಣಿವೆಗೆ ಇಷ್ಟುದಿನ ಅಂತ ಲೆಕ್ಕ ಇಡಬಹುದು